**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**<u>ಎಸ್.ಸಿ. ನಂಃ 10015/2019</u>**

**ಚಾಸಾ ಃ 18**

**ಪ್ರಾಸಾ ಃ 07**

| | | |
|---|---|---|
| **ಹೆಸರು** | **ಃ** | **ಆನಂದ ಡಿ ಆರ್** |
| **ತಂದೆಯ ಹೆಸರು** | **ಃ** | **ರಾಜಣ್ಣ** |
| **ವಯಸ್ಸು** | **ಃ** | **30 ವರ್ಷ** |
| **ವೃತ್ತಿ** | **ಃ** | **ಮಗ್ಗದ ಕೆಲಸ** |
| **ವಾಸ** | **ಃ** | **ಮುತ್ಯಾಲಮ್ಮನ ದೇವಸ್ಥಾನದ ಹತ್ತಿರ, ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 14.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ</u>**

1. ಚಾಸಾ-1 ಮಂಜುನಾಥ, ಅವರ ತಮ್ಮ ಮೃತ ಗಂಗಾಧರ, ಚಾಸಾ-2 ಪವನಕುಮಾರ ಮತ್ತು ಆರೋಪಿ ಆನಂದ ಇವರೆಲ್ಲರು ನನಗೆ ಗೊತ್ತಿರುತ್ತಾರೆ.

2. ದಿನಾಂಕಃ 07.01.2019 ರಂದು ಸೋಮವಾರ ರಾತ್ರಿ ಸುಮಾರು 09.30 ಗಂಟೆಯಲ್ಲಿ ಪ್ರೀತಿ ವೈನ್ಸ್ ಹತ್ರಿ ಕೊರಚೆಟ್ಟಿಗೆ ಹೋಗುವ ರಸ್ತೆಯಲ್ಲಿ ಆನಂದ, ಲೋಕಿ, ಸ್ವಾಮಿ, ಗಂಗಾಧರ ಅಲಿಯಾಸ ದಾಸ ಮತ್ತು ಪವನಕುಮಾರ ಇವರೆಲ್ಲರೂ ಅಲ್ಲಿ ಇದ್ದರು. ಅಲ್ಲಿದ್ದು ಮಾತನಾಡಿಕೊಂಡಿದ್ದರು. ನಂತರ ನಾನು ನನ್ನ ಕೆಲಸ ಮುಗಿಸಿಕೊಂಡು ಮನೆಗೆ ಹೋಗಿರುತ್ತೇನೆ. ನಾನು ನೋಡುತ್ತಿದ್ದಾಗ ಅವರೆಲ್ಲರೂ ಸಹ ಮಾತನಾಡಿಕೊಂಡು ತಳ್ಳಾಡುತ್ತಿದ್ದರು. ಯಾವ ಕಾರಣಕ್ಕಾಗಿ ಗಲಾಟೆ ಮಾಡಿಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ, ಮಾರನೇ ದಿನ ಕೊಲೆಯಾಗಿರುತ್ತದೆಂದು ಗೊತ್ತಾಗಿರುತ್ತದೆ. ಹಳೇ ದ್ವೇಷ ಇರಬಹುದು. ಯಾರು ಕೊಲೆ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ, ನಾನು ಇಷ್ಟು ನೋಡಿರುತ್ತೇನೆಂದು ಪೋಲೀಸರಿಗಹೆ

ಹೇಳಿಕೆ ನೀಡಿರುತ್ತೇನೆ. ಯಾರು ಯಾರನ್ನು ಕೊಲೆ ಮಾಡಿರುತ್ತಾರೆಂಬ ಬಗ್ಗೆ ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಅಭಿಯೋಜಕರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ ಃ</u>**

3. ದಿನಾಂಕಃ 07.01.2019 ರಂದು ರಾತ್ರಿ ಸುಮಾರು 09.45 ಗಂಟೆಯಲ್ಲಿ ಕೊರಚಲುಹಟ್ಟಿಯ ಕಾಂಕ್ರೇಟ್ ರಸ್ತೆಯ ಪಕ್ಕದ ಖಾಲಿ ಜಾಗದಲ್ಲಿ ಪರಿಚಯ ಇದ್ದ ಮಂಜನಾಥ, ಮತ್ತು ಅವನ ತಮ್ಮ ಗಂಗಾಧರನು ಕಬಾಬ ಆನಂದ, ಲೋಕಿ, ಸ್ವಾಮಿ ಎರಡೂ ಡಿಯೋ ಗಾಡಿಯಲ್ಲಿ ನಿಂತಿದ್ದು ದಾಸನು ಕಬಾಬ ಆನಂದನ ಮೇಲೆ ಕೈಹಾಕಿ ಏನೋ ಹೇಳತ್ತಿದ್ದಾಗ ಲೋಕಿ ಸ್ವಾಮಿ ಗಾಡಿಗಳನ್ನು ತೆಗೆದುಕೊಂಡು ವೈನ್ ಶಾಪ ಕಡೆ ಹೋಗಿರುತ್ತಾರೆಂದು, ದಾಸನು ಕಬಾಬ ಆನಂದನನ್ನು ಕರೆದುಕೊಂಡು ಗಲ್ಲಿಯ ರಸ್ತೆಯ ಕಡೆ ಹೋಗಿದ್ದನೆಂದು ದಾರಿ ದೀಪದ ಬೇಳಕಿನಲ್ಲಿ ನಾನು ನೋಡಿರುತ್ತೇನೆಂದು, ದಿನಾಂಕಃ 08.01.2019 ರಂದು ನನ್ನ ಸ್ನೇಹಿತನು ಪೋನು ಮಾಡಿ ನೆನ್ನೆ ರಾತ್ರಿ ಕೊರಚಲುಹಟ್ಟಿಯಲ್ಲಿ ಆದ ಗಲಾಟೆಗೆ ದಾಸನಿಗೆ ಪವನನು ಹೊಡೆದಿರುತ್ತಾನೆಂದು, ದಾಸನು ಆಸ್ಪತ್ರೆಯಲ್ಲಿ ಸತ್ತುಹೋಗಿರುತ್ತಾನೆಂದು ತಿಳಿಸಿದನು ಎಂದು ನಾನು ಪೋಲಿಸರಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ಗಂಗಾಧರ ಅಲಿಯಾಸ ದಾಸ ಮತ್ತು ಕಬಾಬ ಆನಂದನ ನಡುವೆ ದ್ವೇಷ ಇದ್ದು ಕಬಾಬ ಲೋಕಿ ಮತ್ತು ಸ್ವಾಮಿಗೆ ಕಣ್‌ಸನ್ನೆಯಲ್ಲಿ ಹೆದರಿಸಿ ಕಳುಹಿಸಿ ಕಬಾಬ ಆನಂದನನ್ನು ಗಲ್ಲಿ ರಸ್ತೆಯೊಳಗೆ ಕರೆದುಕೊಂಡು ಹೋದಾಗ ಅಲ್ಲಿ ದಾಸ ಮತ್ತು ಕಬಾಬ ಆನಂದ ಇಬ್ಬರೂ ಕತ್ತಿನಪಟ್ಟಿ ಏಹಿಡಿದುಕೊಂಡು ಒಬ್ಬರಿಗೊಬ್ಬರು ಜಗಳ ಮಾಡಿಕೊಂಡು ಎಳೆದಾಡುತ್ತಿದ್ದಾಗ, ದಾಸನು ಹಾಕಿಕೊಂಡಿದ್ದ ಜರ್ಕಿನ್‌ನಲ್ಲಿದ್ದ ಖಾರದ ಪುಡಿ ಪೊಟ್ಟಣ ಕೆಳಗೆ ಬಿದ್ದಿದ್ದು ನಂತರ ದಾಸನು ತನ್ನ

ಜರ್ಕಿನ್ ಒಳಗೆ ಇಟ್ಟಿದ್ದಮಚ್ಚನ್ನು ತೆಗೆದುಕೊಂಡು ಕಬಾಬ ಆನಂದನಿಗೆ ಹೊಡೆಯಲು ಹೋದಾಗ ಕಬಾಬ ಅನಂದನು ಆ ಮಚ್ಚನ್ನು ಹಿಡಿದುಕೊಂಡು ಇಬ್ಬರೂ ಕುತ್ತಿಗೆಗೆ ಹೊಡೆಯುವ ರೀತಿಯಲ್ಲಿ ಜಗಳವಾಡುತ್ತಿದ್ದಾಗ ದಾಸನ ಕೈಯಲ್ಲಿದ್ದ ಮಚ್ಚನ್ನು ಕಿತ್ತುಕೊಂಡವನೇ ಏಕಾಏಕಿ ಮಚ್ಚಿನಿಂದ ದಾಸನ ತಲೆಗೆ ಹೊಡೆದಾಗ, ಲೈಟ್ ಕಂಬದ ಬಳಿ ನಿಂದ ಪವನ ಅಲಿಯಾಸ ಬೆಂಕಿ ಓಡಿಹೋಗಿ ಕಬಾಬ ಆನಂದೆನಿಗೆ ದಾಸನಿಗೆ ಹೊಡೆಯಬೇಡ ಎಂದು ಬಿಡಿಸಲು ಹೋದಾಗ ಕಬಾಬ ಆನಂದನು ಅದೇ ಮಚ್ಚಿನಿಂದ ಪವನ ಅಲಿಯಾಸ ಬೆಂಕಿಯ ಬಲತಲೆಗೆ, ಎಡಗೈಗೆ, ಗಾಯ ಮಾಡಿ ರಕ್ತಗಾಯಪಡಿಸಿರುತ್ತಾನೆಂದು, ಕೆಳಗೆ ಬಿದ್ದಿದ್ದ ಖಾರದ ಪುಡಿಯನ್ನು ಕಬಾಬ ಆನಂದ ಎತ್ತಿಕೊಂಡು ದಾಸನ ಮುಖ ತಲೆಗೆ ಎರಚಿ ಮಚ್ಚಿನಿಂದ ದಾಸನ ಮುಖ, ಕುತ್ತಿಗೆ, ಎಡಕೈಗೆ, ಎಡಕೆನ್ನೆಗೆ, ಹಲವು ಸಲ ಹೊಡೆದುಭೀಕರ ರಕ್ತಗಾಯಗೊಳಿಸಿತರುತ್ತಾನೆಂದು ಮತ್ತು ಕಬಾಬ ಆನಂದನನ್ನು ನಾನು ನೋಡಿದ್ದೇನೆ ಎಂದು ಈಗ ತೋರಿಸಿದಂತೆ ನಾನು ಪೋಲಿಸರಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನುನಿಪಿ-24 ಎಂದು ಗುರುತಿಸಲಾಯಿತು. ಘಟನೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಟಿಜಿವಿ ವಕೀಲರವರಿಂದ ಃ</u>**

5. ಕತ್ತಲಾಗಿದ್ದರಿಂದ ಯಾರು ಯಾರು ಯಾವ ಬಣ್ಣದ ಬಟ್ಟೆ ಹಾಕಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಆ ದಿನ ನಾನು ಮದ್ಯಪಾನ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರೀತಿ ವೈನ್ಸ್‌ಗೆ ಮದ್ಯಪಾನ ಮಾಡಲು ಹೋಗಿದ್ದೆ ಎಂದು ಪೋಲೀಸರಲ್ಲಿ ಯಾವುದೇ ಹೇಳಿಕೆ ಕೊಟ್ಟಿಲ್ಲ. ಮಂಜುನಾಥ ಮತ್ತು ನಾನು ಸ್ನೇಹಿತರು. ಆ ದಿನ ಗಂಗಾಧರನ ಜೊತೆ ಯಾರೂ ಇರಲಿಲ್ಲ ಎಂದರೆ ಸಂಯಿಲ್ಲ. ಮಂಜುನಾಥನ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಃ</u>** ಇಲ್ಲ

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10015/2019**

**ಚಾಸಾ ಃ 17**

**ಪ್ರಾಸಾ ಃ 06**

| | | |
|---|---|---|
| **ಹೆಸರು** | **ಃ** | **ವೆಂಕಟೇಶ ಬಾಬು** |
| **ತಂದೆಯ ಹೆಸರು** | **ಃ** | **ಮುನಿಕಾಳಯ್ಯ** |
| **ವಯುಸ್ಸು** | **ಃ** | **50 ವರ್ಷ** |
| **ವೃತ್ತಿ** | **ಃ** | **ಹಾಲು ವ್ಯಾಪಾರ** |
| **ವಾಸ** | **ಃ** | **ಕಾಲೇಜು ರಸ್ತೆ, ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 14.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ-1 ಮಂಜುನಾಥ, ಅವರ ತಮ್ಮ ಮೃತ ಗಂಗಾಧರ, ಚಾಸಾ-2 ಪವನಕುಮಾರ ಮತ್ತು ಆರೋಪಿ ಆನಂದ ಇವರೆಲ್ಲರು ನನಗೆ ಗೊತ್ತಿರುತ್ತಾರೆ. ಮಂಜುನಾಥನ ಮತ್ತು ಆತನ ಸಹೋದರ ಮೃತ ಗಂಗಾಧರನು ಅಂಗಡಿ ಇಟ್ಟುಕೊಂಡು ನೀರಿನ ವ್ಯಾಪಾರ ಮಾಡುತ್ತಿದ್ದರು. ಸತೀಶನ ಮಕ್ಕಳಾದ ಆರೋಪಿಗಳಾದ ಆನಂದ, ಲೋಕಿ ಇವರಿಬ್ಬರೂ ಕಬಾಬ ಅಂಗಡಿ ಇಟ್ಟುಕೊಂಡಿದ್ದರು. ಮೃತ ಗಂಗಾಧರ, ಆನಂದ, ಲೋಕಿ ಇವರೆಲ್ಲರೂ ಸ್ನೇಹಿತರಿದ್ದರು.

2. ಕೊಂಗಾಡಿಯಪ್ಪ ಕಾಲೇಜು ರಸ್ತೆಯಲ್ಲಿರುವ 10 ನೇ ಕ್ರಾಸ್‌ನಲ್ಲಿರುವ ಕರೇನಹಳ್ಳಿಯ ನಮ್ಮ ಅಂಗಡಿಯ ಪಕ್ಕದಲ್ಲಿರುವ ರಸ್ತೆಯಲ್ಲಿ ದಿನಾಕಃ 07.01.2019 ರಂದು ಸೋಮವಾರ ರಾತ್ರಿ ಸುಮಾರು 08.00-08.30 ಗಂಟೆ ಸಮಯದಲ್ಲಿ ಮೃತ ಮತ್ತು ಆರೋಪಿತರು ಹಾಗೂ ಉಳಿದವರು ಒಟ್ಟು 6-7 ಜನ ಸ್ನೇಹಿತರು ನಿಂತಿದ್ದರು. ಆ ಸಮಯದಲ್ಲಿ ನಾನು ಸದರಿ ರಸ್ತೆಯ ಮೂಲಕ ನಮ್ಮ ಅಂಗಡಿಗೆ ಹೋಗುತ್ತಿದ್ದೇನು. ಸದರಿ ರಸ್ತೆಯು 10 ನೇ ಕ್ರಾಸನಲ್ಲಿರುತ್ತದೆ. ನಾನು ಅಂಗಡಿಗೆ ಹೋದ 10-20 ನಿಮಿಷಗಳ ನಂತರ ಗಲಾಟೆ ಆಗಿರುತ್ತದೆ. ಜನಗಳು ಓಡುತ್ತಿದ್ದರು. ಆಗ ನಾನೂ

ಕೂಡ ಅಲ್ಲಿಗೆ ಹೋದೆನು. ನೀರು ಮಾರುತ್ತಿದ್ದ ಹುಡುಗನಿಗೆ ಬಲ ಮೊಣಕೈ ಹತ್ತಿರ ಹಾಗೂ ಬಲ ಕುತ್ತಿಗೆಯ ಬಲಭಾಗದಲ್ಲಿ ಹೊಡೆದಿದ್ದರು, ರಕ್ತ ಬರುತ್ತಿತ್ತು, ಆಗ ಅವರ ಅಣ್ಣ ಮತ್ತು ಮನೆಯವರು ಅಲ್ಲಿಗೆ ಬಂದು ಅವರನ್ನು ಆಟೋದಲ್ಲಿ ಕರೆದುಕೊಂಡು ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

3. ನಂತರ ಆತನು ಸತ್ತುಹೋಗಿರುತ್ತಾನೆಂದು ಗೊತ್ತಾಯಿತು. ಅವರವರೇ ಕಿತ್ತಾಡಿಕೊಂಡು ಹೊಡೆದಾಡಿಕೊಂಡಿರುತ್ತಾರೆಂದು ಗೊತ್ತಾಯಿತು. ಹಳೆಯ ಜಿದ್ದು ಇಟ್ಟುಕೊಂಡು ಗಲಾಟೆ ಮಾಡಿಕೊಂಡಿರುತ್ತಾರೆ. ನಂತರ ಗಂಗಾಧರ ಸತ್ತುಹೋದರು. ಪೋಲೀಸರಿಗೆ ಈ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಟಿಜಿವಿ ವಕೀಲರವರಿಂದ ಃ</u>**

4. ನಾನು ನಂದಿನ ಹಾಲಿನ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ. ಬೆಳಗ್ಗೆ ಸುಮಾರು 04.30 ಗಂಟೆಗೆ ಹೋಗಿ ರಾತ್ರಿ 11.00 ಗಂಟೆಯವರೆಗೆ ಅಂಗಡಿಯನ್ನು ತೆಗೆದಿರುತ್ತೇನೆ. ಆರೇಳು ಹುಡುಗರ ಹೆಸರು ನನಗೆ ನೆನಪು ಇರುವುದಿಲ್ಲ, ಘಟನಾ ಸ್ಥಳದಲ್ಲಿ ಹೋದಾಗ ಯಾರು ಯಾರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ಹೇಳಲು ಬರುವುದಿಲ್ಲ, ಮೃತನ ಹೆಸರು ಹೇಳಲು ಬರುವುದಿಲ್ಲ, ಅವರ ಅಣ್ಣನ ಹೆಸರು ನೆನಪಿರುವುದಿಲ್ಲ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಪೋಲೀಸು ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ, ಪೋಲೀಸರು ಕರೆಸಿದ್ದರಿಂದ ಹೋಗಿರುತ್ತೇನೆ ಮತ್ತು ಹೇಳಿಕೆ ನೀಡಿರುತ್ತೇನೆ.

5. ನನ್ನನ್ನು ಅವರ ಅಣ್ಣ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಈಗ ಸಾಕ್ಷ್ಯ ಹೇಳಿದ ಮೇಲಿನ ಅಂಶವನ್ನು ನನ್ನ ಹೇಳಿಕೆಯಲ್ಲಿ ನೀಡಿರುತ್ತೇನೆ. ಆದಿನ ನಾನು ಘಟನೆಯನ್ನು ನೋಡಿರುವುದಿಲ್ಲಎಂದರೆ ಸರಿಯಲ್ಲ, ಮೃತನ ಅಣ್ಣನ ಮಾತು ಕೇಳಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋಗಿರುವುದಿಲ್ಲ ಮತ್ತು ಯಾವುದೇಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಃ</u>**

ಇಲ್ಲ

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10015/2019**

**ಚಾಸಾ ಃ 14**

**ಪ್ರಾಸಾ ಃ 05**

| | | |
|---|---|---|
| **ಹೆಸರು** | **ಃ** | **ಮಂಜುನಾಥ** |
| **ತಂದೆಯ ಹೆಸರು** | **ಃ** | **ಈಶ್ವರಪ್ಪ** |
| **ವಯುಸ್ಸು** | **ಃ** | **33 ವರ್ಷ** |
| **ವೃತ್ತಿ** | **ಃ** | **ಮಗ್ಗದ ಕೆಲಸ** |
| **ವಾಸ** | **ಃ** | **ತ್ಯಾಗರಾಜನಗರ, ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 14.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ-2 ಪವನಕುಮಾರ ಕೆ.ಟಿ ಮತ್ತು ಚಾಸಾ-13 ನವೀನಕುಮಾರ ನನಗೆ ಗೊತ್ತಿರುತ್ತಾರೆ. ನಾನು ಸಹಿ ಮಾಡುತ್ತೇನೆ.

2. ದಿನಾಕಃ 09.01.2019 ರಂದು ನನ್ನನ್ನು ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಯಲ್ಲಿರುವ ಗೆಳತಿ ವಿಭಾಗಕ್ಕೆ ಪೋಲೀಸರು ಪವನಕುಮಾರನ ಬಟ್ಟೆಯನ್ನು ತೆಗೆದುಕೊಳ್ಳುತ್ತಿದ್ದೇವೆ ಬನ್ನಿ ಎಂದು ನನ್ನನ್ನು ಕರೆದಿದ್ದರು. ಪವನಕುಮಾರನ ರಕ್ತ ಆಗಿದ್ದ ಬ್ಲೂ ಕಲರ ಪ್ಯಾಂಟ್, ಹಸಿರು ಬಣ್ಣದ ಡಿಸೈನ ಇರುವ ಶರ್ಟ್ ಅನ್ನು ತೆಗೆದುಕೊಂಡು ಸೀಲು ಮಾಡಿ ನನ್ನ ಮತ್ತು ನವೀನನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಬಟ್ಟೆಗಳು ಪವನಕುಮಾರನಿಗೆ ಸೇರಿದ್ದು ಎಂದು ಹೇಳಿ ಪೇಪರ ಮೇಲೆ ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-23 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-23 ಎ ಎಂದು ಗುರುತಿಸಲಾಯಿತು.

3. ನನ್ನ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡ ಪ್ಯಾಂಟ್ ಮತ್ತು ಶರ್ಟ್‌ನ್ನು ನೋಡಿ ಗುರುತಿಸುತ್ತೆನೆ. ಸದರಿ ಪ್ಯಾಂಟ್ ಮತ್ತು ಶರ್ಟ್‌ನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಸೀಲು ಮಾಡಿದ್ದು ಅವುಗಳನ್ನು ತೆರೆಯಲು ನ್ಯಾಯಾಲಯದ ಅನುಮತಿ ಕೋಡಿದ್ದು, ಅನುಮತಿ ನೀಡಲಾಯಿತು. ಅದನ್ನು ತೆರೆದುಸಾಕ್ಷಿದಾರರರಿಗೆ ತೋರಿಸಿದ್ದು ಸಾಕ್ಷಿದಾರರು ಅವುಗಳನ್ನು ನೋಡಿ ಗುರುತಿಸಿರತ್ತೂರೆ. ಸದರಿ ಪ್ಯಾಂಟನ್ನು ಮು.ಮಾ. 11 ಎಂದು ಮತ್ತು ಶರ್ಟ್‌ನ್ನು ಮು.ಮಾ.12 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಟಿಜಿವಿ ವಕೀಲರವರಿಂದ ಃ</u>**

4. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಚಾಸಾ-1 ರವರು ನನ್ನನ್ನು ಕರೆದುಕೂಂಡು ಬಂದಿದ್ದರು ಎಂದರೆ ಸರಿಯಲ್ಲ, ನಾನು ಒಬ್ಬನೇ ಬಂದಿದ್ದೇನು. ನನ್ನನ್ನು ಬರಲು ಪೋಲೀಸರು ಲಿಖಿತವಾಗಿ ನೀಡಿರಲಿಲ್ಲ ಬಾಯಿಮಾತಲ್ಲಿ ಹೇಳಿದ್ದರು. ನಾನು ಹೋದಾಗ ಸಂಜೆ 06.00 ಗಂಟೆ ಆಗಿತ್ತು, ಒಂದು ಗಂಟೆ ಅಲ್ಲಿದ್ದೇನು. ಸಿದ್ದರಾಜು ಒಬ್ಬರೇ ಪೋಲೀಸರು ಇದ್ದರು. ಪೋಲೀಸು ಠಾಣೆಯಲ್ಲಿ ನಾನು ಮೂರು ಸಹಿ ಮಾಡಿರುತ್ತೇನೆ. ಪಂಚನಾಮೆಗೆ ಮಾತ್ರ ಒಂದು ನಾನು ಸಹಿ ಮಾಡಿರುತ್ತೇನೆ. ಉಳಿದ ಸಹಿಗಳನ್ನು ಬೇರೆ ಯಾವ ದಾಖಲೆಗೆ ಮಾಡಿರುತ್ತೇನೆಂದು ನೆನಪು ಇರುವುದಿಲ್ಲ, ಬಟ್ಟೆಗಳು ಆಸ್ಪತ್ರೆಯ ಗೆಳತಿ ವಿಭಾಗದ ಟೇಬಲ್ ಮೇಲೆ ಇದ್ದವು. ಬಟ್ಟೆಗಳ ಪೋಟೋಗಳನ್ನು ಅದೇ ದಿನ ತೆಗೆದಿರುತ್ತಾರೆ. ಆದರೆ ಯಾರೆಂದು ಗೊತ್ತಿರುವುದಿಲ್ಲ.

5. ನಮ್ಮ ಜೊತೆ ನವೀನ ಸಹ ಇದ್ದನು. ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ, ಬಟ್ಟೆಗಳನ್ನು ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಬಟ್ಟೆಗಳೊಂದಿಗೆ ನಿಂತು ನಮ್ಮ ಪೋಟೋವನ್ನು ತೆಗೆದುಕೊಂಡಿರುವುದಿಲ್ಲ, ಸದರಿ ದಾಖಲೆಯಲ್ಲಿ ದಿನಾಂಕಃ 09.01.2019 ರಂದು ನವೀನನ ಬಟ್ಟೆಗಳನ್ನು ಸೀಜು ಮಾಡುತ್ತಿದ್ದೇವೆ ಸಾಕ್ಷಿದಾರರಾಗಿ ಬನ್ನಿ ಎಂದು ಹೇಳಿ ನಮ್ಮ ಸಮಕ್ಷಮದಲ್ಲಿ ಬಟ್ಟೆಗಳನ್ನು ಸೀಜು ಮಾಡಿ ಸಹಿ ಪಡೆದುಕೊಂಡಿರುತ್ತಾರೆ ಎಂದು ಬರೆದಿರುತ್ತಾರೆ. ಸದರಿ ದಾಖಲೆಯನ್ನು ಪೋಲೀಸ ಸಿದ್ದರಾಜು ಅವರು ಬರೆದಿರುತ್ತಾರೆ. ಪೋನು ಮಾಡಿ

ಪೋಲೀಸರು ಪೋಲೀಸ ಠಾಣೆಗೆ ಬರುವಂತೆ ಹೇಳಿದ್ದರಿಂದ ನಾನು ಪೊಲೀಸ ಠಾಣೆಗೆ ಹೋಗಿರುತ್ತೇನೆ. ಮಂಜುನಾಥ ಕರೆದುಕೊಂಡು ಹೋಗಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚೆಕ್ಕುಬಂದಿ ಹೇಳಲು ಬರುವುದಿಲ್ಲ.

6. ಪೋಲೀಸು ಠಾಣೆಯಲ್ಲಿ ಪಂಚನಾಮೆ ಬರೆದು ಅಲ್ಲಿಯೇ ಅಮಾನತ್ತುಮಾಡಿಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ದಿನ ಆಸ್ಪತ್ರೆಗೆಹೋಗಿರುವುದಿಲ್ಲ, ನನ್ನ ಸಮಕ್ಷಮ ಯಾವುದೇ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಂಜುನಾಥವ ಅವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ**

ಇಲ್ಲ

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ